ಅನುಬಂಧ

1. ರಾಜ್ಯೋತ್ಸವ ಪ್ರಶಸ್ತಿ:

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತಿದೆ. ಆಯಾ ವರ್ಷದಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಹರಾದವರನ್ನು ಆಯ್ಕೆ ಮಾಡಲು ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ಸರ್ಕಾರದ ಮಟ್ಟದಲ್ಲಿ ನೇಮಿಸಲಾಗುತ್ತದೆ. ಉಪ ಸಮಿತಿಯು ಆಯ್ಕೆ ಕಾರ್ಯವನ್ನು ನಡೆಸುತ್ತದೆ.

2. ಗೌರವಧನ:

ಸರ್ಕಾರದ ಆದೇಶ ನಂ:ಇಡಿ:185:ಎಸ್‌ಟಿಜಿ:77, ದಿನಾಂಕ:4.6.80 ರಲ್ಲಿ ಕೆಳಕಂಡ ಮಾರ್ಗ ಸೂಚಿಯನ್ನು ಗೌರವಧನ ಮಂಜೂರಾತಿಗೆ ಅಳವಡಿಸಲಾಗಿದೆ.

1. ಗೌರವಧನ ಪಡೆಯಬೇಕಾದವರಿಗೆ ಕನಿಷ್ಠ 55 ವರ್ಷಗಳಾಗಿರಬೇಕು.
2. ಆಯಾಯಾ ಕ್ಷೇತ್ರದಲ್ಲಿ 25 ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರಬೇಕು.
3. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪುರಸ್ಕಾರ ಹಾಗೂ ರಾಜ್ಯ ಹಾಗೂ ಕೇಂದ್ರ ಅಕಾಡೆಮಿ ಪ್ರಶಸ್ತಿ ಪಡೆದವರಾಗಿರಬೇಕು.
4. ಆರ್ಥಿಕ ಪರಿಸ್ಥಿತಿ ಹಾಗೂ ಅರ್ಹತೆಗೆ ಹೆಚ್ಚು ಆದ್ಯತೆ ಕೊಡಲಾಗುತ್ತದೆ. ಆರ್ಥಿಕವಾಗಿ ದುರ್ಬಲರಾಗಿರುವವರನ್ನು ಮೊದಲು ಪರಿಗಣಿಸಲಾಗುತ್ತದೆ.
5. ವಾರ್ಷಿಕ ವರಮಾನ ರೂ.8000–00 ದಿಂದ ರೂ.10,000–00ದ ಒಳಗಿರಬೇಕು.

ಬೆಳಗಾವಿ ಜಿಲ್ಲೆಯಲ್ಲಿಯ ಅರ್ಹ ಜನರಿಗೆ ಹಸಿರು ಕಾರ್ಡುಗಳು

1242 (1891): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಹಸಿರು ಕಾರ್ಡುಗಳನ್ನು ವಿತರಿಸಲಾಗಿರುವುದು, (ತಾಲೂಕುವಾರು ವಿವರ ಕೊಡುವುದಾಗ ಬೇಕು);

ಆ. ಬೆಳಗಾವಿ ಜಿಲ್ಲೆಯ ಅರ್ಹ ಜನರಿಗೆ ಹಸಿರು ಕಾರ್ಡುಗಳನ್ನು ಕೊಡದೇ ಇದ್ದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ ಹಸಿರು ಕಾರ್ಡುಗಳನ್ನು ಪಡೆಯಲು ಅರ್ಹರಾದ ಜನರಿಗೆ ಇನ್ನು ಮುಂದೆಯಾದರೂ ಹಸಿರು ಕಾರ್ಡುಗಳನ್ನು ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಈ. ಅರ್ಹರಾದ ಜನರಿಗೆ ಹಸಿರು ಕಾರ್ಡುಗಳನ್ನು ಕೊಡುವಲ್ಲಿ ಅನುಸರಿಸಿದ ನಿಯಮಗಳಾವುವು;

ಉ. ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿಯ ಎಷ್ಟು ಜನರು ಹಸಿರು ಕಾರ್ಡುಗಳನ್ನು ಈ ಮೊದಲು ಹೊಂದಿದ್ದರು ಮತ್ತು ನಂತರ ಈಗ ಎಷ್ಟು ಜನರಿಗೆ ಹೊಸದಾಗಿ ಹಸಿರು ಕಾರ್ಡನ್ನು ಕೊಡಲಾಗಿರುವುದು; (ತಾಲೂಕುವಾರು ಸಂಪೂರ್ಣ ವಿವರ ಕೊಡುವುದಾಗಬೇಕು);

ಊ. ಬೈಲಹೊಂಗಲ ಮತ್ತು ಸವದತ್ತಿ ತಾಲೂಕಿನಲ್ಲಿಯ ಅರ್ಹರಾದ ಜನರಿಗೆ ಹಸಿರು ಕಾರ್ಡಗಳನ್ನು ಕೊಡುವಲ್ಲಿ ಬಹಳೇ ಅನ್ಯಾಯವಾದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಋ. ಹಾಗಿದ್ದಲ್ಲಿ ಅರ್ಹರಾದ ಜನರಿಗೆ ಹಸಿರು ಕಾರ್ಡುಗಳನ್ನು ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ. 3,00,183 (ತಾಲ್ಲೂಕುವಾರು ವಿವರಗಳನ್ನು ಲಗತ್ತಿಸಲಾಗಿದೆ).

ಆ. ಹೌದು – 11,406 ತ್ರಿವರ್ಣ ಪಡಿತರ ಚೀಟಿಗಳನ್ನು ಇನ್ನೂ ವಿತರಿಸಬೇಕಾಗಿದೆ.

ಇ. ಹೌದು.

ಈ. ಘೋಷಿತ ಕೊಳಚೆ ಪ್ರದೇಶಗಳು, 20,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಏರೆ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಹಾಗೂ ವಾರ್ಷಿಕವಾಗಿ ರೂ.6,400 ಕ್ಕಿಂತ ಕಡಿಮೆ ಆದಾಯವಿರುವ ಕುಟುಂಬಗಳು ಹಸಿರು ಪಡಿತರ ಚೀಟಿ ಹೊಂದಲು ಅರ್ಹರು.

ಉ. ಬೈಲಹೊಂಗಲ ತಾಲ್ಲೂಕಿನಲ್ಲಿ 17,823 ಹಸಿರು ಪಡಿತರ ಚೀಟಿಗಳು, ಸವದತ್ತಿ ತಾಲ್ಲೂಕಿನಲ್ಲಿ 14,419 ಹಸಿರು ಪಡಿತರ ಚೀಟಿಗಳನ್ನು ಈ ಹಿಂದೆ ವಿತರಿಸಲಾಗಿತ್ತು. ನಿಯಮದಂತೆ ಹೊಸದಾಗಿ ಫಲಾನುಭವಿಗಳನ್ನು ಗುರ್ತಿಸಿ ಬೈಲಹೊಂಗಲ ತಾಲ್ಲೂಕಿನಲ್ಲಿ 7,397 ಮತ್ತು ಸವದತ್ತಿ ತಾಲ್ಲೂಕಿನಲ್ಲಿ 8,514 ತ್ರಿವರ್ಣ ಪಡಿತರ ಚೀಟಿಗಳನ್ನು ಹಂಚಲಾಗಿದೆ.

ಊ. ಇಲ್ಲ.

ಋ. ಉದ್ಭವಿಸುವುದಿಲ್ಲ.

ಅನುಬಂಧ – ಅ

ಬೆಳಗಾಂ ಜಿಲ್ಲೆಯಲ್ಲಿ ವಿತರಿಸಲಾದ ತ್ರಿವರ್ಣ ಪಡಿತರ ಚೀಟಿಗಳ ತಾಲೂಕುವಾರು ವಿವರ ಪಟ್ಟಿ

ಕ್ರ.ಸಂ.	ತಾಲ್ಲೂಕಿನ ಹೆಸರು	ವಿತರಿಸಲಾದ ತ್ರಿವರ್ಣ ಪಡಿತರ ಚೀಟಿಗಳು
1.	ಬೆಳಗಾಂ	37,600
2.	ಖಾನಾಪುರ	18,800
3.	ಹುಕ್ಕೇರಿ	25,500
4.	ಚಿಕ್ಕೋಡಿ	48,200
5.	ರಾಯಬಾಗ್	21,200
6.	ಅಥಣಿ	39,600
7.	ಬೈಲಹೊಂಗಲ	25,220
8.	ಸೌಂದತ್ತಿ	22,963
9.	ರಾಮದುರ್ಗ	23,500
10.	ಗೋಕಾಕ್	37,600
	ಒಟ್ಟು	3,00,183

ರಾಜ್ಯದಲ್ಲಿ ಮಾರಾಟವಾಗುವ ಇತರೆ ರಾಜ್ಯಗಳ ಲಾಟರಿ ಟಿಕೇಟುಗಳ ಮೇಲೆ ಮಾರಾಟ ತೆರಿಗೆ

1238 (1930): ಶ್ರೀ ಡಿ.ಆರ್. ಪಾಟೀಲ್ (ಗದಗ್):-

ಮಾನ್ಯ ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಕರ್ನಾಟಕ ರಾಜ್ಯದಲ್ಲಿ ಯಾವ ಯಾವ ರಾಜ್ಯ ಸರ್ಕಾರಗಳ ಒಂದಂಕಿ ಹಾಗೂ ಇತರ ಟಿಕೇಟುಗಳು ಮಾರಾಟವಾಗುತ್ತಿವೆ;

ಆ. ಪ್ರತಿ ತಿಂಗಳು ಸರಾಸರಿ ಬೇರೆ ರಾಜ್ಯಗಳ ಲಾಟರಿ ಟಿಕೇಟುಗಳು ಮಾರಾಟವಾಗುವ ಮೊತ್ತವೆಷ್ಟು;

ಇ. ರಾಜ್ಯದಲ್ಲಿ ಮಾರೂಟವಾಗುವ ಬೇರೆ ರಾಜ್ಯಗಳ ಲಾಟರಿ ಟಿಕೇಟುಗಳ ಮೇಲೆ ಮಾರಾಟ ತೆರಿಗೆ ವಿಧಿಸಲಾಗಿದೆಯೇ;

ಈ. ಇಲ್ಲದಿದ್ದಲ್ಲಿ ಈ ರೀತಿ ಮಾರಾಟ ತೆರಿಗೆ ವಿಧಿಸುವ ಪ್ರಸ್ತಾವನೆ ಸರ್ಕಾರದವರ ಮುಂದೆ ಇದೆಯೇ;

ಉ. ಮಾರಾಟ ತೆರಿಗೆ ವಿಧಿಸದಿದ್ದರೆ, ಬೇರೆ ರಾಜ್ಯಗಳ ಲಾಟರಿ ಟಿಕೇಟುಗಳ ಮಾರಾಟವನ್ನು ನಿಷೇಧಿಸಲು ಸರಿಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ರಾಮಲಿಂಗಾರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):-